## ಕರ್ನಾಟಕ ಸರ್ಕಾರದ ನಡುವಳಿಗಳು

**ವಿಷಯ :** ಶ್ರೀ ಜಿ.ಬಿ. ನಂದಿ, ಕಿರಿಯ ಇಂಜಿನಿಯರ್ (ನಿವೃತ್ತ) ಇವರಿಗೆ ನಿವೃತ್ತಿ ಸೌಲಭ್ಯಗಳ ಮೇಲೆ ಬಡ್ಡಿ ಪಾವತಿಸುವ ಬಗ್ಗೆ. - ಆದೇಶ.

**ಓದಲಾಗಿದೆ :** 1. ಸರ್ಕಾರದ ಆದೇಶ ಸಂಖ್ಯೆ:FD(Spl) 199 PEN 93, ದಿನಾಂಕ:13-09-1994.
2. ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ: 1017/2017ರಲ್ಲಿ ದಿನಾಂಕ:09.07.2019 ರಂದು ನೀಡಿರುವ ಆದೇಶ.

**ಪ್ರಸ್ತಾವನೆ:**

ಶ್ರೀ ಜಿ.ಬಿ. ನಂದಿ, ಕಿರಿಯ ಇಂಜಿನಿಯರ್ ಇವರು ಮೂಲತಃ ಲೋಕೋಪಯೋಗಿ ಇಲಾಖೆಯ ನೌಕರರಾಗಿದ್ದು, ನಿಯೋಜನೆ ಮೇಲೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಿದ್ದು, ದಿನಾಂಕ: 31.05.2006 ರಂದು ಸೇವೆಯಿಂದ ನಿವೃತ್ತಿ ಹೊಂದಿರುತ್ತಾರೆ.

ಶ್ರೀ ಜಿ.ಬಿ. ನಂದಿ, ಕಿರಿಯ ಇಂಜಿನಿಯರ್ ಇವರು ಈ ಹಿಂದೆ ಸೇವೆಯಲ್ಲಿದ್ದಾಗ ಸದರಿ ಅಧಿಕಾರಿ ಹಾಗೂ ಇನ್ನೊಬ್ಬ ಅಧಿಕಾರಿಯು ಮುಂಡರಗಿ ಪಂ.ರಾಜ್ ಇಂಜಿನಿಯರಿಂಗ್ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಅಂದರೆ 1997-2001ರ ಅವಧಿಯಲ್ಲಿ ಸಮಗ್ರಿಗಳ ಕೊರತೆ ಹಾಗೂ ಕಾಮಗಾರಿಗಳನ್ನು ಮಂಜೂರಾದ ಅಂದಾಜಿನ ಅನುಸಾರ ಅನುಷ್ಠಾನಗೊಳಿಸದೆ ಸರ್ಕಾರಕ್ಕೆ ಒಟ್ಟು 21,27,644/-ರೂ.ಗಳ ಆರ್ಥಿಕ ನಷ್ಟ ಉಂಟುಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಸದರಿಯವರುಗಳ ವಿರುದ್ಧ ವಿವರವಾದ ಇಲಾಖಾ ವಿಚಾರಣೆಯನ್ನು ಕೈಗೊಂಡು ಸರ್ಕಾರವು ಸದರಿ ಅಧಿಕಾರಿ ಹಾಗೂ ಇನ್ನೊಬ್ಬ ಅಧಿಕಾರಿಯಿಂದ ಸರ್ಕಾರಕ್ಕೆ ಉಂಟಾದ ನಷ್ಟದ ಮೊತ್ತವನ್ನು ಸಮಾನವಾಗಿ ಶೇ.8ರ ಬಡ್ಡಿಯೊಂದಿಗೆ ವಸೂಲು ಮಾಡಲು ದಿನಾಂಕ:13-08-2009ರ ಆದೇಶದಲ್ಲಿ ಆದೇಶಿಸಿರುತ್ತದೆ.

ಸದರಿ ಆದೇಶದ ವಿರುದ್ಧ ಶ್ರೀ ಜಿ.ಬಿ. ನಂದಿ ಹಾಗೂ ಇನ್ನೊಬ್ಬರು ಮಾನ್ಯ ಕೆ.ಎ.ಟಿ.ಯಲ್ಲಿ ಅರ್ಜಿ ಸಂಖ್ಯೆ:4078/2009 ಮತ್ತು 4435/2009 ಸಲ್ಲಿಸಿದ್ದು, ಸದರಿ ಅರ್ಜಿಗಳಿಗೆ ಸಂಬಂಧಿಸಿದಂತೆ ನ್ಯಾಯಮಂಡಳಿಯು ದಿನಾಂಕ:15-11-2006 ರಂದು ಸರ್ಕಾರದ ದಂಡನಾದೇಶವನ್ನು ರದ್ದು ಪಡಿಸುವುದರ ಜೊತೆಗೆ ಸದರಿಯವರಿಗೆ ಲಭ್ಯವಾಗಬೇಕಾದ ಸೌಲಭ್ಯಗಳನ್ನು ನೀಡಲು ಆದೇಶಿಸಿರುತ್ತದೆ. ಏತನ್ಮಧ್ಯೆ, ಶ್ರೀ ಜಿ.ಬಿ. ನಂದಿ, ಇವರು ತಮ್ಮ ನಿವೃತ್ತಿ ಸೌಲಭ್ಯಗಳ ಮೇಲೆ ಬಡ್ಡಿಯನ್ನು ಪಾವತಿಸುವ ಬಗ್ಗೆ ಮನವಿ ಸಲ್ಲಿಸಿದ್ದು, ಸದರಿಯವರು ಸಲ್ಲಿಸಿದ್ದ ಅರ್ಜಿಯು ಬಾಕಿಯಿದ್ದ ಕಾರಣ ಅವರಿಗೆ ದಿನಾಂಕ:27-09-2016ರಂದು ಹಿಂಬರಹವನ್ನು ನೀಡಲಾಗಿತ್ತು.

ಪುನಃ ಶ್ರೀ ಜಿ.ಬಿ. ನಂದಿ, ಇವರು ಮಾನ್ಯ ಕೆ.ಎ.ಟಿ.ಯಲ್ಲಿ ಸದರಿ ಹಿಂಬರದ ವಿರುದ್ಧ ಅರ್ಜಿ ಸಂಖ್ಯೆ: 1017/2017 ಸಲ್ಲಿಸಿದ್ದು, ಮಾನ್ಯ ಕೆ.ಎ.ಟಿ.ಯು ಸದರಿ ಅರ್ಜಿಗೆ ಸಂಬಂಧಿಸಿದಂತೆ ದಿನಾಂಕ:09-07-2019 ರಂದು ಪ್ರಾಥಮಿಕ ವಿಚಾರಣೆ ಕೈಗೆತ್ತಿಕೊಂಡ ಸಂದರ್ಭದಲ್ಲೇ ಈ ಕೆಳಕಂಡಂತೆ ಆದೇಶವನ್ನು ನೀಡಿರುತ್ತದೆ:-

> "The Application is allowed. The endorsement bearing No. ಗ್ರಾಅಪ 193 ಜಿಪಅ 2016, Dt. 27-09-2016 (Annexure-A6) issued by the first respondednt is set aside. First respondent is directed to consider the representations and pay interest as per GO dated 13.09.1994 on belated payment of timebound advancement and leave encashment etc. from 30.01.1996 to 10.06.2019 within a period of 4 months from the date of receipt of this order."

ಮಾನ್ಯ ನ್ಯಾಯ ಮಂಡಳಿಯ ಆದೇಶದನ್ವಯ ಪ್ರಕರಣವನ್ನು ಪರಿಶೀಲಿಸಲಾಗಿದೆ. ಈ ಹಿಂದೆ ಶ್ರೀ ಜಿ.ಬಿ. ನಂದಿ, ಕಿರಿಯ ಇಂಜಿನಿಯರ್ ಹಾಗೂ ಶ್ರೀ ಎಂ.ವಿ. ರಾಜಶೇಖರ್ ಸಹಾಯಕ ಇಂಜಿನಿಯರ್ ಗಳು ಮುಂಡರಗಿ ಪಂ.ರಾಜ್, ಪಂ.ರಾ.ಇಂ. ಉಪ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿದ್ದ 1999-2000ನೇ ಅವಧಿಯಲ್ಲಿ ಮುರಡಿ-ಬನ್ನಿಕೊಪ್ಪ ರಸ್ತೆ ರಿಪೇರಿಗಾಗಿ ಉದ್ಯೋಗ ಭರವಸೆ ಯೋಜನೆಯಡಿ ಮಂಜೂರಾದ 55,539/- ರೂ.ಗಳಿಗೆ ಕಾಮಗಾರಿ ಅನುಷ್ಠಾನಗೊಳಿಸದೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸರ್ಕಾರದ ಹಣ ದುರುಪಯೋಗಪಡಿಸಿಕೊಂಡಿರುತ್ತಾರೆ ಎಂಬ ಆರೋಪಕ್ಕೆ ಸಂಬಂದಿಸಿದಂತೆ ಮುಂಡರಗಿ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಲಾಗಿತ್ತು. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಜೆ.ಎಂ.ಎಫ್.ಸಿ. ಮುಂಡರಗಿ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ : ಸಿಸಿ 26/2008ರಲ್ಲಿ ಸುದೀರ್ಘವಾಗಿ ವಿಚಾರಣೆ ನಡೆದಿದ್ದು ಅಂತಿಮವಾಗಿ ದಿನಾಂಕ:07-06-2019ರಂದು ಮಾನ್ಯ ನ್ಯಾಯಾಲಯವು ನೀಡಿರುವ ತೀರ್ಪಿನಲ್ಲಿ ಶ್ರೀ ಎಂ.ವಿ. ರಾಜಶೇಖರ್, ಸಹಾಯಕ ಇಂಜಿನಿಯರ್ ಇವರ ವಿರುದ್ಧದ ಆರೋಪವು ಸಾಬೀತಾಗಿಲ್ಲವೆಂದು ಅವರನ್ನು ಆರೋಪ ಮುಕ್ತರನ್ನಾಗಿಸಿರುತ್ತದೆ.

ಶ್ರೀ ಜಿ.ಬಿ. ನಂದಿ, ಅಂದಿನ ಕಿರಿಯ ಇಂಜಿನಿಯರ್, ಇವರ ವಿರುದ್ಧದ ಆರೋಪವು ಐ.ಪಿ.ಸಿ. ಕಲಂ 465, 468 ಮತ್ತು 409ರಡಿಯಲ್ಲಿ ಸಾಬೀತಾಗಿದ್ದು, ಈ ಕೆಳಕಂಡಂತೆ ದಂಡನೆಯನ್ನು ವಿಧಿಸಿರುತ್ತದೆ.

> "The accused No.1 is sentenced with 3-months simple imprisonment with fine of Rs.1,000/- for the offence punishable U/Sec. 465 of IPC. In default, accused shall under go simple imprisonment for a period of 15-days.
>
> The accused No.1 is sentenced with 6-months simple imprisonment with fine of Rs.3000/-for the offence punishable U/sec. 468 of IPC. In default of payment of fine amount, accused shall under go further simple imprisonment for a period of 1-month.
>
> The accused No.1 is sentenced with 6-months simple imprisonment with fine of Rs. 5000/- for the offence punishable U/sec.409 of the IPC. In default of payment of fine amount, accused shall under go further simple imprisonment for a period of 1-month.
>
> All the sentences shall run concurrently."

ಮೇಲಿನ ಆದೇಶಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಇಲಾಖಾ ಹಂತದಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.

ಸೇವೆಯಿಂದ ನಿವೃತ್ತಿ ಹೊಂದಿದ ಸರ್ಕಾರಿ ನೌಕರರಿಗೆ ನಿವೃತ್ತಿ ಸೌಲಭ್ಯಗಳನ್ನು ಬಿಡುಗಡೆ ಮಾಡುವಲ್ಲಿ ಆಗುವ ವಿಳಂಬಕ್ಕೆ ಬಡ್ಡಿ ಪಾವತಿಸುವ ಬಗ್ಗೆ ಆರ್ಥಿಕ ಇಲಾಖೆಯು ಸರ್ಕಾರದ ಆದೇಶ ಸಂಖ್ಯೆ:FD(Spl) 199 PEN 93, ದಿನಾಂಕ:13-09-1994ರಲ್ಲಿ ಮಾರ್ಗದರ್ಶನವನ್ನು ನೀಡಿದ್ದು, ಸದರಿ ಆದೇಶದ ಅನುಸಾರ ವಿಳಂಬವಾಗಿ Timebound advance increment ಮಂಜೂರು ಮಾಡಿದ್ದಲ್ಲಿ, ಅಂತಹ ಮೊತ್ತಕ್ಕೆ ಬಡ್ಡಿಯನ್ನು ಪಾವತಿಸಲು ಅವಕಾಶವಿರುವುದಿಲ್ಲ. ಹಾಗಾಗಿ, ಮಾನ್ಯ ನ್ಯಾಯಮಂಡಳಿಯು ಅರ್ಜಿ ಸಂಖ್ಯೆ:1017/2017ರಲ್ಲಿ ದಿನಾಂಕ:09-07-2019ರಂದು ನೀಡಿರುವ ಆದೇಶವನ್ನು ಸೀಮಿತವಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗಿರುತ್ತದೆ. ಆದ್ದರಿಂದ, ಗಳಿಕೆ ರಜೆ ನಗಧೀಕರಣದ ವಿಳಂಬಿತ ಅವಧಿಗೆ ಬಡ್ಡಿಯನ್ನು ಈ ಕೆಳಕಂಡಂತೆ ಲೆಕ್ಕಚಾರ ಮಾಡಿ ಪಾವತಿಸಲು ಸರ್ಕಾರವು ತೀರ್ಮಾನಿಸಿರುತ್ತದೆ.

| ಕ್ರ. ಸಂ. | ವಿವರಣೆ | ಪಾವತಿಸಬೇಕಾಗಿರುವ ಮೊತ್ತ ರೂ. |
|---|---|---|
| 1 | ನಿವೃತ್ತಿ ಹೊಂದಿದ ದಿನಾಂಕ 31.05.2006. ಗಳಿಕೆ ರಜೆ ನಗಧೀಕರಣ ಸೌಲಭ್ಯ ಪಾವತಿಸಬೇಕಾಗಿದ್ದ ಮೊತ್ತ | 1,71,322/- |
| 2 | ದಿನಾಂಕ 03.10.2006ರಂದು ಪಾವತಿಸಿದ ಮೊತ್ತ | 85,376/- |
| 3 | ಬಾಕಿ ಉಳಿದ ಮೊತ್ತ | 85,946/- |
| 4 | ದಿನಾಂಕ 05.12.2009ರಂದು ಪಾವತಿಸಿದ ಮೊತ್ತ | 18,565/- |
| 5 | ದಿನಾಂಕ 13.03.2018 ರಂದು ಪಾವತಿಸಿದ ಮೊತ್ತ | 67,381/- |
| 6 | **ಪಾವತಿಸಬೇಕಾದ ಬಡ್ಡಿ ಮೊತ್ತ:** ದಿನಾಂಕ 04.10.2006 ರಿಂದ 05.12.2009ರವರೆಗೆ - 85,946/-ರೂ.ಗಳಿಗೆ ಶೇ.8%ರಂತೆ ಬಡ್ಡಿ-3 ವರ್ಷ, 02 ತಿಂಗಳು, 01 ದಿವಸ | 21,782/- |
| 7 | ದಿನಾಂಕ 06.12.2009 ರಿಂದ 13.3.2018 ರವರೆಗೆ - 08 ವರ್ಷ 03 ತಿಂಗಳು 07 ದಿನ ಮೊತ್ತ 67,387/- ರೂ.ಗಳಿಗೆ ಶೇ. 8ರಂತೆ | 44,576/- |
| 8 | ಒಟ್ಟು ಬಡ್ಡಿಯ ಮೊತ್ತ | 66,358/- |
| | **ಅರವತ್ತಾರು ಸಾವಿರ ಮೂರು ನೂರ ಐವತ್ತೆಂಟು ರೂಪಾಯಿಗಳು ಮಾತ್ರ** | |

ಅದರಂತೆ, ಈ ಆದೇಶ.

**ಆದೇಶ ಸಂ: ಆರ್‌ಡಿಪಿಆರ್ 105 ಜಿಪಅ 2017, ಬೆಂಗಳೂರು, ದಿನಾಂಕ:10-06-2020.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಗಾಗಿ ಸರ್ಕಾರವು ಶ್ರೀ ಜಿ.ಬಿ.ನಂದಿ, ಕಿರಿಯ ಇಂಜಿನಿಯರ್ ಇವರಿಗೆ ಗಳಿಕೆ ರಜೆ ನಗಧೀಕರಣ ಸೌಲಭ್ಯದ ಮೊತ್ತವನ್ನು ವಿಳಂಬವಾಗಿ ಪಾವತಿಸಿದ ಅವಧಿಗೆ ಸರ್ಕಾರದ ಆದೇಶ ಸಂಖ್ಯೆ: FD(Spl) 1 PEN 03 ದಿನಾಂಕ:21.08.2003ರ ಅನುಸಾರ 66,358/-ರೂ.ಗಳನ್ನು (ಅರವತ್ತಾರು ಸಾವಿರ ಮೂರು ನೂರ ಐವತ್ತೆಂಟು ರೂಪಾಯಿಗಳು ಮಾತ್ರ) ಬಡ್ಡಿ ಎಂದು ಮಂಜೂರು ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
10/06/2020
**(ಸಿ. ಮಂಜುನಾಥ್)**
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಇಲಾಖೆ.

**ಗೆ:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ಶ್ರೀ ಜಿ.ಬಿ.ನಂದಿ, ಕಿರಿಯ ಇಂಜಿನಿಯರ್ (ನಿವೃತ್ತ), ಹೌಸ್ ನಂ. ಸಿ/1, 2124, ಬಸವನಗರ, ಹಳಿಯಾಳ ರಸ್ತೆ, ದಾರವಾಡ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಗದಗ.
4. ಕಾರ್ಯಪಾಲಕ ಇಂಜಿನಿಯರ್ ಪಂ.ರಾ.ಇಂ. ವಿಭಾಗ, ಗದಗ.
5. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂರಾಇಂ. ಉಪ ವಿಭಾಗ, ಮುಂಡರಗಿ
6. ಸರ್ಕಾರಿ ವಕೀಲರು, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು (ಉಲ್ಲೇಖ ಅರ್ಜಿ ಸಂಖ್ಯೆ:1017/2017 ಆದೇಶ ದಿನಾಂಕ:09-07-2019)
7. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ಬೆಂಗಳೂರು.
8. ಶಾಖಾ ರಕ್ಷ ಕಡತ / ಹೆಚ್ಚುವರಿ ಪ್ರತಿ.